ಪಶು ಚಿಕಿತ್ಸಾಲಯಗಳ ದುರಸ್ಥಿ

1165 (1818); ಶ್ರೀಮತಿ ಜೊಲ್ಲೆ ಶಶಿಕಲಾ ಅಣ್ಣಾಸಾಹೇಬ್ (ನಿಪ್ಪಾಣಿ)

ಅ) ನಿಪ್ಪಾಣಿ ಮತಕ್ಷೇತ್ರದಲ್ಲಿರುವ ಪಶುಚಿಕಿತ್ಸಾಲಯಗಳು ಎಷ್ಟು; ಅಲ್ಲಿನ ವೈದ್ಯರು / ವಿವಿಧ ಸಿಬ್ಬಂದಿಗಳ ಸಂಖ್ಯೆ ಎಷ್ಟು; ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿ ಎಷ್ಟು; ಕೊರತೆ ಇರುವ ಸಿಬ್ಬಂದಿ ಎಷ್ಟು; ಇದರಿಂದ ಅಲ್ಲಿನ ಸಾರ್ವಜನಿಕರು ಅನುಭವಿಸುತ್ತಿರುವ ತೊಂದರೆ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ಸಿಬ್ಬಂದಿಗಳ ಭರ್ತಿಗಾಗಿ ಯೋಜನೆಯನ್ನೇನಾದರೂ ರೂಪಿಸಿದೆಯೇ;

ಇ) ಈ ಮತಕ್ಷೇತ್ರದ ಪಶುಚಿಕಿತ್ಸಾಲಯಗಳಲ್ಲಿ ಶಿಥಿಲಾವಸ್ಥೆಯಲ್ಲಿರುವ ಕಟ್ಟಡಗಳು ಯಾವುವು; ಅವುಗಳನ್ನು ಅಭಿವೃದ್ಧಿಪಡಿಸುವುದಾಗಲೀ ಅಥವಾ ದುರಸ್ತಿ ಮಾಡುವುದಾಗಲೀ ಅಥವಾ ಮೇಲ್ದರ್ಜೆಗೇರಿಸುವ ಯೋಜನೆಯನ್ನು ಸರ್ಕಾರವು ರೂಪಿಸಿದೆಯೇ; ಹಾಗಿದ್ದಲ್ಲಿ ಯಾವ ಯಾವ ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸಲಾಗುವುದು, ಇದರ ಅಂದಾಜು ಮೊತ್ತವೆಷ್ಟು;

ಈ) ಈ ಕ್ಷೇತ್ರದಲ್ಲಿ 01-04-2013 ರಿಂದ 20-12-2013ರ ವರೆಗೆ ಕಾಲು-ಬಾಯಿ ಬೇನೆಯಿಂದ ಮೃತಪಟ್ಟ ಜಾನುವಾರುಗಳ ಸಂಖ್ಯೆ ಎಷ್ಟು ಹಾಗೂ ದಿನಾಂಕ 21-12-2013 ರಿಂದ 31-01-2014ರ ವರೆಗೆ ಮೃತಪಟ್ಟ ಜಾನುವಾರುಗಳ ಸಂಖ್ಯೆ ಎಷ್ಟು; ಈ ಸಂಬಂಧ ಎಷ್ಟು ಪರಿಹಾರ ಧನವನ್ನು ವಿತರಿಸಲಾಗಿದೆ; (ಅಂಕಿ ಅಂಶಗಳನ್ನು ಗ್ರಾಮವಾರು ಪ್ರತ್ಯೇಕವಾಗಿ ವಿವರ ನೀಡುವುದು)?

ಶ್ರೀ ಟಿ.ಬಿ. ಜಯಚಂದ್ರ (ಕಾನೂನು, ಸಂಸದೀಯ ವ್ಯವಹಾರಗಳು, ಪಶುಸಂಗೋಪನ ಹಾಗೂ ಮುಜರಾಯಿ ಸಚಿವರು)

ಅ) ನಿಪ್ಪಾಣಿ ಮತಕ್ಷೇತ್ರದಲ್ಲಿ ಒಟ್ಟು 13 ಪಶುವೈದ್ಯಕೀಯ ಸಂಸ್ಥೆಗಳು ಕಾರ್ಯ ನಿರ್ವಹಿಸುತ್ತಿವೆ.

ಸಿಬ್ಬಂದಿಗಳ ವಿವರ ಈ ಕೆಳಕಂಡಂತಿದೆ:

ಕ್ರ. ಸಂ	ಹುದ್ದೆಯ ಹೆಸರು	ಹುದ್ದೆಗಳ ವಿವರ		
		ಮಂ	ಭ	ಖಾ
1	ಸಹಾಯಕ ನಿರ್ದೇಶಕರು	1	0	1
2	ಪಶುವೈದ್ಯಾಧಿಕಾರಿ	10	4	6
3	ಜಾನುವಾರು ಅಧಿಕಾರಿ	0	0	0
4	ಹಿರಿಯ ಪಶುವೈವ್ಯಕೀಯ ಪರೀಕ್ಷಕರು	7	7	0
5	ಪಶುವೈದ್ಯಕೀಯ ಪರೀಕ್ಷಕರು	5	3	2
6	ಪಶುವೈದ್ಯಕೀಯ ಸಹಾಯಕರು	4	0	4
7	ಡಿ ದರ್ಜೆ ನೌಕರರು	26	11	15
ಒಟ್ಟು		**53**	**25**	**28**

ಹೌದು. ಇರುವ ಸಿಬ್ಬಂದಿ ಮೂಲಕ ಸಾರ್ವಜನಿಕರಿಗೆ ತಂಟೆಯಾಗದಂತೆ ಸೇವೆ ಒದಗಿಸಲಾಗುತ್ತಿದೆ.

ಆ) ಖಾಲಿ ಇರುವ ಸಹಾಯಕ ನಿರ್ದೇಶಕರ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮವಹಿಸಲಾಗುವುದು.

ಪಶುವೈದ್ಯಾಧಿಕಾರಿಗಳ 350 ಹುದ್ದೆಗಳನ್ನು ವಿಶೇಷ ನೇಮಕಾತಿ ನಿಯಮಗಳಡಿ ಭರ್ತಿ ಮಾಡುವ ಪ್ರಕ್ರಿಯೆ ಪ್ರಗತಿಯಲ್ಲಿದೆ.

ಇತರೆ ವೃಂದಗಳಾದ ಜಾನುವಾರು ಅಧಿಕಾರಿ, ಹಿರಿಯ ಪಶುವೈದ್ಯಕೀಯ ಪರೀಕ್ಷಕರು, ಪಶುವೈದ್ಯಕೀಯ ಪರೀಕ್ಷಕರು, ಅಧೀಕ್ಷಕರ ಹುದ್ದೆಗಳನ್ನು ಮುಂಬಡ್ತಿ ನೀಡುವ ಸಂದರ್ಭದಲ್ಲಿ ಆವ್ಯತೆ ಮೇಲೆ ಭರ್ತಿ ಮಾಡಲು ಕ್ರಮವಹಿಸಲಾಗುವುದು.

ಪಶುವೈದ್ಯಕೀಯ ಸಹಾಯಕರು, ಪ್ರಥಮ ದರ್ಜೆ ಸಹಾಯಕರು, ದ್ವಿತೀಯ ದರ್ಜೆ ಸಹಾಯಕರು, ವಾಹನ ಚಾಲಕರು, ಬೆರಳಚ್ಚುಗಾರರ, ಡಿ–ದರ್ಜೆ ಹುದ್ದೆಗಳನ್ನು, ನೇರ ನೇಮಕಾತಿ ಹಾಗೂ ಮುಂಬಡ್ತಿ

ಮುಖಾಂತರ ಆದ್ಯತೆ ಮೇಲೆ ಭರ್ತಿ ಮಾಡಲು ಕ್ರಮವಹಿಸಲಾಗುವುದು.

ಇ) ನಿಪ್ಪಾಣಿ ವಿಧಾನ ಸಭಾ ಕ್ಷೇತ್ರದಲ್ಲಿ ಬೋರಗಾಂವ ಮತ್ತು ಬೇಡಕಿಹಾಳ ಗ್ರಾಮಗಳಲ್ಲಿನ ಪಶುವೈದ್ಯ ಸಂಸ್ಥೆಗಳ ಕಟ್ಟಡಗಳು ಶಿಥಿಲಾವಸ್ಥೆಯಲ್ಲಿರುತ್ತದೆ.

ಸದರಿ ಕಟ್ಟಡಗಳನ್ನು 2015–16ನೇ ಸಾಲಿನ ಜಿಲ್ಲಾ ಪಂಚಾಯತ್ ವಲಯದ ಕಟ್ಟಡ ಲೆಕ್ಕ ಶೀರ್ಷಿಕೆಯಡಿ ಅನುದಾನದ ಲಭ್ಯತೆ ಆಧರಿಸಿ ದುರಸ್ತಿ ಕಾರ್ಯವನ್ನು ಕೈಗೊಳ್ಳಲಾಗುವುದು.

ಈ) ನಿಪ್ಪಾಣಿ ವಿಧಾನ ಸಭಾ ಕ್ಷೇತ್ರದಲ್ಲಿ ದಿನಾಂಕ: 01.04.2013 ರಿಂದ ದಿನಾಂಕ: 20.12.2013ರ ವರೆಗೆ ಈ ಕೆಳಕಂಡಂತೆ ಜಾನುವಾರುಗಳು ಮರಣಿಸಿದ್ದು ಅವುಗಳ ಮಾಲೀಕರಿಗೆ ₹ 1,55,000/– ಪರಿಹಾರ ವಿತರಿಸಲಾಗಿದೆ.

ಗ್ರಾಮದ ಹೆಸರು	ಮರಣಿಸಿದ ರಾಸುಗಳ ಸಂಖ್ಯೆ		ಒಟ್ಟು	ವಿತರಿಸಿದ ಪರಿಹಾರ ಹಸು:– ರು **25000** ಕರು:– ರು **10000**
	ಹಸು	ಕರು		
ಶಿರದವಾಡ	3	1	4	85000
ಬೋರಗಾಂವ ವಾಡಿ	1	–	1	25000
ಕಾರದಗಾ	1	2	3	45000
ಒಟ್ಟು	**5**	**3**	**8**	**155000**

ದಿನಾಂಕ: 21.12.2013 ರಿಂದ ದಿನಾಂಕ: 31.01.2014 ವರೆಗೆ 65 ರಾಸುಗಳು ಮೃತಪಟ್ಟಿದ್ದು ಮಾಹಿತಿಯನ್ನು ಅನುಬಂಧದಲ್ಲಿ ನೀಡಿದೆ. ದಿನಾಂಕ: 21.12.2013 ರ ನಂತರ ಪರಿಹಾರ ಧನವನ್ನು ವಿತರಿಸುವ ಯೋಜನೆ ಇಲ್ಲದ ಕಾರಣ ವಿತರಿಸಿರುವುದಿಲ್ಲ.

ಅನುಬಂಧ

ಶ್ರೀಮತಿ ಜೊಲ್ಲೆ ಶಶಿಕಲಾ ಅಣ್ಣಾಸಾಹೇಬ, ಮಾನ್ಯ ಶಾಸಕರು, ನಿಪ್ಪಾಣಿ ವಿಧಾನ ಸಭಾ ಕ್ಷೇತ್ರ, ಅವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂ. ೩೫೩ ಕ್ಕೆ ಉತ್ತರಿಸಿದ ನಿಪ್ಪಾಣಿ ವಿಧಾನ ಸಭಾ ಕ್ಷೇತ್ರದಲ್ಲಿ ದಿ: ೦೧/೧೨/೨೦೦೮ ರಿಂದ ೦೧/೧/೨೦೧೫ ರವರೆಗೆ ಮರಣಿಸಿದ ಜಾನುವಾರುಗಳ ವಿವರ

ಕ್ರ.ಸಂ	ವಿಧಾನಸಭಾ ಕ್ಷೇತ್ರ	ಗ್ರಾಮದ ಹೆಸರು	ಮರಣಿಸಿದ ಜಾನುವಾರುಗಳ ಸಂಖ್ಯೆ			
			ಹೈನು ರಾಸುಗಳು	ಉಳುಮೆ ರಾಸುಗಳು	ಕರುಗಳು	ಒಟ್ಟು
1	ನಿಪ್ಪಾಣಿ	ಶಿರಗನವಾಡ	4	0	10	14
		ಕಾದರಗಾ	13	0	2	15
		ಮಾಗುರ	9	0	7	16
		ಗಳತಗಾ	7	0	0	7
		ಬೋಜ	4	0	0	4
		ಬೋರಗಾವ	2	0	0	2
		ಕೋಡ್ನಿ	2	0	0	2
		ಕುರ್ಲಿ	2	1	1	4
		ಬಾರವಾಡ	1	0	0	1
ಒಟ್ಟು			44	1	20	65